**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,</u>**

**<u>ಪೊನ್ನಂಪೇಟೆ</u>**

**ಸಿ.ಸಿ. ನಂ. 42/2024 ಫ್ರಾ.ಸಾ -4**

**ಚಾ.ಸಾ – 4**

**<u>ದಿನಾಂಕಃ 03.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | | |
|---|---|---|
| ಸಾಕ್ಷಿಯ ಹೆಸರು | : | ಚಂಗಪ್ಪ @ ಸಾಬು |
| ತಂದೆಯ ಹೆಸರು | : | ಲೇಟ್ ಬೆಳ್ಳಿಯಪ್ಪ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಚಾಲಕರು |
| ವಾಸ ಸ್ಥಳ | : | ಹುದಿಕೇರಿ ಗ್ರಾಮ |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–</u>**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ–</u>**

ಚಾಸಾ 1 ಪರಿಚಯ. ದಿ. 15.07.2023 ರಂದು ಸಂಜೆ ಚಾಸಾ 3 ರವರು ದೂರುವಾಣಿ ಕರೆ ಮಾಡಿ ಚಾಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂ ಡು ಹೋಗಲು ತಿಳಿಸಿದರು ಎಂದರೆ ಸರಿ. ಸಂಜೆ ಚಾಸಾ 1 ರವರ ಮನಗೆ ತಲುಪಿದಾಗ ಚಾಸಾ 1 ರವರ ಎಡಕಿವಿಯ ಹಿಂಭಾಗದಲ್ಲೆ ಗಾಯವಾಗಿತ್ತು ಎಂದರೆ ಸರಿ. ಆಗ ನಾನು ಗಾಯದ ಬಗ್ಗೆ ಕೇಳಿದಾಗ ಆರೋಪಿ ಕೋವಿಯಿಂದ ಹೊಡೆದು ಗಾಯಪಡಿಸಿದರು ಎಂದು ತಿಳಿಸಿದರು

ಎಂದರೆ ಸರಿ. ನಂತರ ಅವರನ್ನು ನಾನು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆ ಎಂದರೆ ಸರಿ. ನಂತರ ಪೊಲೀಸರು ಬಂದು ಹೇಳಿಕೆ ಪಡೆದು ದೂರು ದಾಖಲಾದ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಜಿ. ಆರ್. ವಕೀಲರಿಂದಃ**

ಸಂಜೆ 05.00 ಗಂಟೆಗೆ ಚಾಸಾ 1 ರವರ ಹೆಂಡತಿಕಡೆಯಿಂದ ಕರೆ ಬಂತು. ಆರೋಪಿ ಮತ್ತು ಚಾಸಾ 1 ರವರ ನಡುವೆ ಇದ್ದ ಸಂಬಂದದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ 1 ರವರಿಗೆ ಗಾಯ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ. 07.30 ಸಮಯದಲ್ಲಿ ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಬಂದೆವು. ಸುಮಾರು 08.30 ಸಮಯದಲ್ಲಿ ಪೊಲೀಸರು ನನ್ನ ವಿಳಾಸ ಪಡೆದುಕೊಂಡರು, ಬೇರೆ ಏನು ಪಡೆಯಲಿಲ್ಲ. ಮರುದಿನ ಬೆಳಿಗ್ಗೆ ಆಸ್ಪತ್ರೆಯಿಂದ ಅವರ ಮನೆಗೆ ಕರೆದುಕೊಂಡು ಹೋದರು. ಚಾಸಾ 1 ರವರಿಗೆ ನಾನು ಖಾಯಂ Driver ಎಂದರೆ ಸರಿ. ಚಾಸಾ 1 ರವರಿಗೆ ಸಹಾಯ ಮಾಡಲು ಅವರಿಗೆ ಯಾವುದೇ ಗಾಯಗಳಾಗದಿದ್ದರೂ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

Sd/-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ